# * ವರ್ಧಮಾನ ಮಹಾವೀರ- ಒಂದು ಕಿರು ಪರಿಚಯ *

ಡಾ. ಸರಸ್ವತಿ ವಿಜಯಕುಮಾರ್

ಮೈಸೂರಿನ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್‌ನಲ್ಲಿ ಪ್ರಾಧ್ಯಾಪಕರಾಗಿರುವ ಲೇಖಕಿಯು ಮಹಾವೀರರ ಜೀವನ ಹಾಗೂ ಸಂದೇಶವನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ.

ಕ್ರಿಸ್ತಪೂರ್ವ ೫೯೯ನೇ ಚೈತ್ರ ಶುಕ್ಲಪಕ್ಷದ ಹದಿಮೂರನೆಯ ದಿನ: ವಸಂತ ಋತುವಿನ ಸಮೃದ್ಧ ಕಾಲ. ವೈಶಾಲಿನಗರದ ಕುಂಡಲಪುರದ ಪಾವನ ಕ್ಷೇತ್ರದಲ್ಲಿ ಸಿದ್ಧಾರ್ಥ ರಾಜನ ರಾಣಿ ತ್ರಿಶಲಾದೇವಿ ಪ್ರಾತಃಸಮಯದಲ್ಲಿ ವರ್ಧಮಾನ ಮಹಾವೀರನಿಗೆ ಜನ್ಮವಿತ್ತಳು. ಆಕೆಯನ್ನು ಪ್ರಿಯಕಾರಿಣಿ ದೇವಿಯೆಂದೂ ಕರೆಯುತ್ತಿದ್ದರು. ತಾಯಿಯ ಗರ್ಭದಲ್ಲಿ ಈ ಮಹಾಪುರುಷನು ಅವತರಿಸುತ್ತಿದ್ದಂತೆಯೇ ಆ ರಾಜಮನೆತನವು ಎಲ್ಲ ರೀತಿಯಿಂದಲೂ ವೃದ್ಧಿಯನ್ನು ಹೊಂದಿದುದರಿಂದ ಅವನಿಗೆ ವರ್ಧಮಾನನೆಂದು ಹೆಸರಾಯಿತು.

ಈಗಿನ ಬಿಹಾರ ರಾಜ್ಯದೊಳಗಿನ ಕೆಲವು ಪ್ರದೇಶ ಗಳನ್ನೊಳಗೊಂಡ ಲಿಚ್ಛವಿ ಎಂಬ ಹೆಸರಿನ ರಾಜ್ಯವೊಂದಿತ್ತು. ಅದನ್ನೇ ವಿದೇಹವೆಂದೂ ಕರೆಯುತ್ತಿದ್ದರು. ಅದರ ರಾಜಧಾನಿ ವೈಶಾಲಿ. ಲಿಚ್ಛವಿ ರಾಜ್ಯದಲ್ಲಿ ಹಲವು ಮಂದಿ ಗಣರಾಜ ರಿದ್ದರು. ಅವರೆಲ್ಲರ ಅಧಿಪತಿಯಾಗಿ ಚೇಟಕರಾಜ ವೈಶಾಲಿ ಯಲ್ಲಿ ಆಳುತ್ತಿದ್ದನು. ಗಣರಾಜರಲ್ಲಿ ಕುಂಡಲಪುರದ ಸಿದ್ಧಾರ್ಥ ರಾಜನೂ ಒಬ್ಬನಾಗಿದ್ದ. ಚೇಟಕನ ಮಕ್ಕಳಲ್ಲಿ ಒಬ್ಬ ಳಾದ ತ್ರಿಶಲಾದೇವಿ, ಸಿದ್ಧಾರ್ಥರಾಜನ ಪತ್ನಿಯಾಗಿ, ತೀರ್ಥಂಕರನ ಮಾತೆಯಾಗಿ ಧನ್ಯಳಾದಳು.

ವರ್ಧಮಾನ ಬೆಳೆಯುತ್ತಿದ್ದಂತೆ ಧೈರ್ಯ, ಸಾಹಸಪ್ರಜ್ಞೆ ಗಳನ್ನು ವಿಶೇಷವಾಗಿ ಪ್ರಕಟಪಡಿಸಿದ. ಅಪೂರ್ವ ತೇಜಸ್ಸು, ಬುದ್ಧಿಮತ್ತೆಯಿಂದಾಗಿ 'ಅತಿವೀರ' 'ಸನ್ಮತಿ' ಎಂಬ ಅನ್ವರ್ಥ ನಾಮಗಳನ್ನೂ ಪಡೆದ. ವರ್ಧಮಾನನ ಕಾಲದಲ್ಲಿ ಭಾರತದ ಪರಿಸ್ಥಿತಿ ಚಿಂತಾಜನಕವಾಗಿತ್ತು. ಉಚ್ಚ ನೀಚ ಭಾವನೆಗಳು, ದಾಸ-ದಾಸಿಯರ ಶೋಷಣೆ, ಧರ್ಮದ ಹೆಸರಿನಲ್ಲಿ ಯಜ್ಞ-ಯಾಗಾದಿಗಳ ಮೂಲಕ ಪ್ರಾಣಿಬಲಿ, ಒಣಚರ್ಚೆ, ಡಂಭಾ ಚಾರ ಮೊದಲಾದ ಅನಾರೋಗ್ಯಕರ ಅಚಾರ-ವಿಚಾರಗಳು ಸಮಾಜದಲ್ಲಿ ತಾಂಡವವಾಡುತ್ತಿದ್ದವು. ಮಹಾವೀರನು ಇಂಥ ಸಾಮಾಜಿಕ ದುರವಸ್ಥೆಯ ವಿರುದ್ಧ ಸ್ಪಂದಿಸಿ ಪರಿಹಾರವನ್ನು ಹುಡುಕಲು ಪ್ರಯತ್ನಿಸಿದ. ವ್ಯಕ್ತಿ-ಸಮಾಜ-ಸಂಸಾರ ಇವುಗಳೊಳಗಿನ ಅರ್ಥವನ್ನು ಶೋಧಿಸಲು ಹಂಬಲಿಸಿದ. ತಂದೆತಾಯಿಗಳಿಗಾದರೋ ಮಗನಿಗೆ ಮದುವೆ ಮಾಡಿ ಮೊಮ್ಮಕ್ಕಳನ್ನು ಕಾಣುವ ಹಂಬಲ. ಆದರೆ ಮಹಾವೀರನಿಗೆ



ಅದಾವುದೂ ಬೇಡವಾಗಿತ್ತು. ಬ್ರಹ್ಮಚಾರಿಯಾಗಿಯೇ ಉಳಿದು ತನ್ನ ಮೂವತ್ತನೇ ವಯಸ್ಸಿನಲ್ಲಿ ಜ್ಞಾತೃಖಂಡವನದಲ್ಲಿ ಮುನಿ ದೀಕ್ಷೆಯನ್ನು ಸ್ವೀಕರಿಸಿದ. ಅನಂತರ ಹನ್ನೆರಡು ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿ ಧರ್ಮವಿಹಾರಗಳನ್ನು ಕೈಗೊಂಡ. ಆಗ ಉಪದೇಶ ಮಾಡದಿದ್ದರೂ ಅವನ ಅಹಿಂಸಾ ಪರ ಆಚರಣೆಯೇ ಜನತೆಯಲ್ಲಿ ದಿವ್ಯಸಂದೇಶವನ್ನು ಸಾರು ವಂತಿತ್ತು. ಅವನ ಮೌನವೇ ಅಹಿಂಸೆಯ ಗಾಥೆಯನ್ನು ಹಾಡು ವಂತಿತ್ತು.

ಬಿಹಾರ ಪ್ರಾಂತದಲ್ಲಿ ಧರ್ಮವಿಹಾರವು ನಡೆಯುತ್ತಿದ್ದಾಗ ಅಲ್ಲಿನ ಜೃಂಭಕ ಎಂಬ ಊರಿನ ಹತ್ತಿರದ ಋಜುಕುಲಾ ಎಂಬ ನದಿಯ ತೀರದಲ್ಲಿ ಧ್ಯಾನಮಗ್ನನಾಗಿದ್ದಾಗ ಅವನಿಗೆ ಜ್ಞಾನೋದಯವಾಗಿ, ಜೀವನದ ಅರ್ಥ ಹೊಳೆಯಿತು. ಅಹಿಂಸೆಯ ಉತ್ಕೃಷ್ಟ ಆಚರಣೆಯಿಂದಾಗಿ, ತಪಃಶಕ್ತಿಯಿಂದಾಗಿ, ಸಮತಾಭಾವದಿಂದಾಗಿ ಕೇವಲಜ್ಞಾನ ಪಡೆದ ವರ್ಧಮಾನ ಮಹಾವೀರನಾಗಿ, ಮಹಾನ್ ಜ್ಞಾನಿಯಾದ. ಘಾತಿಕರ್ಮಗಳು

(ಅನಂತ ಗುಣಗಳಿಗೆ ಕೇಡುಮಾಡುವ ಜ್ಞಾನಾವರಣೀಯ, ದರ್ಶನಾವರಣೀಯು, ಮೋಹನೀಯು, ಅಂತರಾಯು ಎಂಬವು) ನಾಶವಾಗಿ ಅವರ ದರ್ಶನ, ಜ್ಞಾನ, ಶಕ್ತಿ ಮತ್ತು ಸುಖಗಳು ಅನಂತವಾದವು. ಅವರು ಬೋಧಿಸುವ ಅರ್ಹತೆಯನ್ನು ಪಡೆದು ಅರ್ಹಂತರಾದರು, ಪೂಜಾರ್ಹರೂ ಆದರು. ಭಗವಾನ್ ವೃಷಭ ತೀರ್ಥಂಕರರ ಪರಂಪರೆಯಲ್ಲಿ ಬಂದ ಇಪ್ಪತ್ತನಾಲ್ಕನೆಯ ತೀರ್ಥಂಕರರೆನಿಸಿದರು, ಧರ್ಮದ ಪುನರುತ್ಥಾನ ಮಾಡಿದರು.

ಮಹಾವೀರರು ತಮ್ಮ ನಲವತ್ತೆರಡನೆಯ ವಯಸ್ಸಿನಿಂದ ಹಿಡಿದು ಎಪ್ಪತ್ತೆರಡನೆಯ ವಯಸ್ಸಿನವರೆಗೆ, ಅಂದರೆ ತಮ್ಮ ಅಂತಿಮ ಕಾಲದವರೆಗೂ ಜನಜಾಗೃತಿಯ ಕಾರ್ಯದಲ್ಲಿ ತೊಡಗಿದರು. ಮೂವತ್ತು ವರ್ಷಗಳ ಕಾಲ ಸಮಾಜವನ್ನು ತಿದ್ದಿ ತೀಡುವುದರಲ್ಲಿ ನಿರತರಾದರು. ಜಾತಿ-ಮತ, ಉಚ್ಚ-ನೀಚ, ಬಡವ-ಶ್ರೀಮಂತ, ಸ್ತ್ರೀ-ಪುರುಷ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದ ಅವರ ಉಪದೇಶ ಸಭೆ 'ಸಮವಸರಣ ಸಭೆ' ಎನಿಸಿತು. ಜನಭಾಷೆಯಾದ ಅರ್ಧಮಾಗಧಿ ಪ್ರಾಕೃತದಲ್ಲಿ ಮಾತನಾಡುತ್ತ ಅವರು ಜನಸಾಮಾನ್ಯರನ್ನು ಮುಟ್ಟುವುದರಲ್ಲಿ ಯಶಸ್ವಿಯಾದರು. ಬ್ರಾಹ್ಮಣ ವಿದ್ವಾಂಸನಾದ ಇಂದ್ರಭೂತಿ ಗೌತಮ ತನ್ನ ಅಪಾರ ಶಿಷ್ಯವರ್ಗದೊಂದಿಗೆ ಬಂದು ಅವರ ಉಪದೇಶವನ್ನು ಕೇಳಿ ಪ್ರಭಾವಿತನಾದನು; ಅವರ ಶಿಷ್ಯನಾದನು. ಅವರ ಬೋಧನೆಯನ್ನು ಪ್ರಚುರಗೊಳಿಸಿ 'ಗಣಧರ'ನೆನಿಸಿದನು. ಮಹಾವೀರರು ತಮ್ಮ ಆತ್ಮಕಲ್ಯಾಣದೊಂದಿಗೆ ಜನತೆಯ ಕಲ್ಯಾಣವನ್ನೂ ಬಯಸಿ ತಮ್ಮ ಜೀವಿತದ ಸಾರ್ಥಕ್ಯವನ್ನು ಪಡೆದುಕೊಂಡರು.

ಜೀವದಯೆಯ ಹಿನ್ನೆಲೆಯಲ್ಲಿ ಮಹಾವೀರರು ರೂಪಿಸಿದ ಪಂಚವ್ರತಗಳು—ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳು ಸ್ವ-ಪರ ಏಳ್ಗೆಗೆ ಕೈದೀವಿಗೆಗಳಾದವು. ಈ ವ್ರತಗಳನ್ನು ಉನ್ನತ ನೆಲೆಯಲ್ಲಿ ಮುನಿಗಳು ಆಚರಿಸಿ ಮಹಾವ್ರತಧಾರಿಗಳೆನಿಸಿದರು. ಹಾಗೆ ಉನ್ನತ ನೆಲೆಯಲ್ಲಿ ಆಚರಿಸಲಾಗದವರು ಅವುಗಳನ್ನು ತಮ್ಮ ಶಕ್ತಿಗೆ ಅನುಸಾರವಾಗಿ ಆಚರಿಸಿ ಶ್ರಾವಕ (ಗೃಹಸ್ಥ) ರೆನಿಸಿದರು. ಮಹಾವೀರರ ವಿಶಿಷ್ಟ ಕೊಡುಗೆಯಾದ ಅನೇಕಾಂತವಾದವು ಅಹಿಂಸೆಯ ಅಡಿಗಲ್ಲಿನ ಮೇಲೆ ಸಾಕಾರಗೊಂಡ ಉತ್ಕೃಷ್ಟ ವಿಚಾರ. ಇದು ಜೈನ ಧರ್ಮದ ಒಂದು ವಿಶೇಷ ತತ್ತ್ವ. ಸತ್ಯದ ಕುರಿತು ಏಳು ರೀತಿಯ ಅಭಿಪ್ರಾಯಗಳಿರಬಹುದು: ಇದ್ದೀತು, ಇರಲಾರದು; ಇರಬಹುದು, ಇರಲಿಕ್ಕಿಲ್ಲ; ಹೇಳಲಾಗುವುದಿಲ್ಲ; ಇದ್ದೀತು, ಹೇಳಲಾಗದು; ಇರಲಾರದು, ಹೇಳಲಾಗದು; ಹಾಗೂ ಇದ್ದೀತು, ಇರಲಾರದು, ಹೇಳಲು ಬರುವುದಿಲ್ಲ. ಸತ್ಯವನ್ನು ಅನೇಕ ನೆಲೆಗಳಿಂದ ಅರಿಯಬೇಕು. ಅದಕ್ಕೆ ಅನೇಕಾಂತವಾದವು ಸಾಧನವಾಗುತ್ತದೆ. ಅದು ಪರಮತ-ಧರ್ಮ-ವಿಚಾರಗಳನ್ನು ಗೌರವಿಸಲು ಅನುವು ಮಾಡಿಕೊಡುತ್ತದೆ ಎಂಬುದನ್ನು ಅವರು ಪ್ರತಿಪಾದಿಸಿದರು; ಸಮದರ್ಶಿತ್ವವನ್ನು ತನ್ಮೂಲಕ ಬೆಳಗಿಸಿದರು.

**ಮಹಾವೀರರು ಬೋಧಿಸಿದ, ಪ್ರಚುರಗೊಳಿಸಿದ ಸಾರಭೂತವಾದ ವಿಚಾರಧಾರೆಗಳಲ್ಲಿ ಕೆಲವು ಇಂತಿವೆ:**

- ಧರ್ಮ ಹಾಗೂ ಧಾರ್ಮಿಕ ಕ್ರಿಯೆಗಳು ಯಾವ ಪ್ರತ್ಯೇಕ ಸಮಾಜದ ಅಥವಾ ವ್ಯಕ್ತಿಯ ಸ್ವತ್ತುಗಳಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಅಚರಿಸಲು ನಡೆಸಲು ಅಧಿಕಾರಿಯಾಗಿದ್ದಾನೆ, ಸ್ವತಂತ್ರನಾಗಿದ್ದಾನೆ.
- ಧರ್ಮದ ಹೆಸರಿನಲ್ಲಿ ಯಜ್ಞ-ಯಾಗಾದಿಗಳ ಮೂಲಕ ಪ್ರಾಣಿವಧೆ ಆಗುತ್ತದೆ. ಅಪಾರವಾದ ಆಹಾರ ಸಾಮಗ್ರಿಗಳು ಸುಟ್ಟು ಬೂದಿಯಾಗುತ್ತವೆ. ಇದರಿಂದ ಸಮಾಜದ ಅರ್ಥವ್ಯವಸ್ಥೆ ಕೆಟ್ಟುಹೋಗುವುದರಿಂದ ಇಂತಹ ಯಜ್ಞಗಳನ್ನು ವಿರೋಧಿಸಬೇಕು.
- ಜನಕಲ್ಯಾಣವು ರಾಜನ ಕರ್ತವ್ಯ. ಪ್ರಜೆಗಳಿಂದ ಹಣ ಸಂಗ್ರಹಿಸುವಾಗ 'ಭ್ರಮರವೃತ್ತಿ' ಇರಬೇಕು. ಭ್ರಮರವು ಅನೇಕ ಹೂಗಳಿಂದ ಮಧುವನ್ನು ಸಂಗ್ರಹಿಸುತ್ತದೆ. ಆಗ ಹೂವಿಗೆ ಕಷ್ಟವಾಗಲಿ-ನಷ್ಟವಾಗಲಿ ಆಗದು. ಕೋಶಕ್ಕೆ ಹಣ ಸಂಗ್ರಹಿಸುವಾಗ ಇದು ರಾಜನ ಸೂತ್ರವಾಗಬೇಕು.
- ಪ್ರತಿಯೊಬ್ಬರ ಶರೀರದಲ್ಲಿಯೂ ಆತ್ಮನಿದ್ದಾನೆ. ಎಲ್ಲರಿಗೂ ಕೈವಲ್ಯ ಪಡೆಯುವ ಯೋಗ್ಯತೆ ಇದೆ.
- ಶರೀರವೇ ಆತ್ಮ ಎಂದು ತಿಳಿಯುವುದೇ ಎಲ್ಲ ದುಃಖಗಳಿಗೆ ಕಾರಣ.
- ರಾಗದ್ವೇಷಾದಿ ದೋಷಗಳಿಲ್ಲದವನೇ ದೇವ.
- ಜ್ಞಾನವೇ ಮಾನವ ಜೀವನದ ಸಾರ. ಅದರ ಪ್ರಕಾಶವನ್ನು ಯಾರೂ ನಷ್ಟಗೊಳಿಸಲಾರರು.
- ಧರ್ಮ ಕೇವಲ ಕೇಳುವ ವಿಷಯವಲ್ಲ; ಆಚರಿಸುವ ಮಾರ್ಗವಾಗಿದೆ. ದಯೆಯೇ ಧರ್ಮದ ಮೂಲ. ಧರ್ಮವು ನಿತ್ಯವೂ ನಡೆಯುವ ಆಚರಣೆ; ಎಂದಾದರೊಮ್ಮೆ ನಡೆಸುವ ಉತ್ಸವವಲ್ಲ.
- ಅಹಿಂಸೆ-ಅಪರಿಗ್ರಹಗಳು ಮನುಷ್ಯನ ಸುಖ-ಶಾಂತಿ-ನೆಮ್ಮದಿಯ ಸೋಪಾನಗಳು. ಅವು ಮನುಷ್ಯನ ಆಚಾರ-ವಿಚಾರಗಳನ್ನು ಪರಿಷ್ಕರಿಸಿ, ವ್ಯಕ್ತಿಗತವಾಗಿಯೂ, ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ, ಸತ್ಫಲಗಳನ್ನು ನೀಡುವಂತಹವು.
- ವಿನಯ ಮುಕ್ತಿಯ ಬಾಗಿಲು. ವಿನಯದಿಂದ ಬರುವುದು ಸಂಯಮ, ತಪ ಮತ್ತು ಜ್ಞಾನ.

- ಎಲ್ಲ ಪ್ರಾಣಿಗಳಿಗೂ ಮಿತ್ರನಾಗು. ಎಲ್ಲ ಜೀವಿಗಳಿಗೂ ಬದುಕಬೇಕೆಂಬ ಬಯಕೆ ಇರುವುದರಿಂದ ಯಾರನ್ನೂ ಹಿಂಸಿಸಬೇಡ.
- ಪರಿಗ್ರಹದ ಮಿತಪರಿಮಾಣದಿಂದಲೇ ಜೀವನದಲ್ಲಿ ಸಮಾಧಾನ.
- ಇತರರ ವಿಚಾರಗಳಲ್ಲಿ ಗೌರವಭಾವ ಇರಲಿ. ಏಕಮುಖವಾದ ವಿತಂಡವಾದವೆನಿಸುತ್ತದೆ ಅಷ್ಟೇ. ವಸ್ತುಸ್ವರೂಪವನ್ನು ಅರಿಯಲು 'ಅನೇಕಾಂತ ವಾದ'ದ ಮೊರೆಹೋಗಬೇಕು.

ಮಹಾವೀರರ ವಿಚಾರಗಳು ಆ ಕಾಲದ ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಜೀವನ ಹಾಗೂ ವ್ಯವಸ್ಥೆಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಉಂಟುಮಾಡಿದವು. ಮಹಾವೀರರು ಸಮಾಜದ ಎಲ್ಲಾ ವರ್ಗದ ಜನಾಂಗದವರಿಗೂ ತಮ್ಮ ಅನುಯಾಯಿಗಳಾಗಲು ಅವಕಾಶ ಕಲ್ಪಿಸಿಕೊಟ್ಟರು. ಇಂದ್ರಭೂತಿ ಗೌತಮ ಮೊದಲಾದ ಬ್ರಾಹ್ಮಣ ವರ್ಗದವರು, ಮೇಘಕುಮಾರ, ನಂದಿಸೇನ ಮೊದಲಾದ ಕ್ಷತ್ರಿಯ ವರ್ಗದವರು, ಶಾಲಿಭದ್ರ, ಧನ ಮೊದಲಾದ ವೈಶ್ಯವರ್ಗದವರು, ಅರ್ಜುನಮಾಲಿ, ಮೈತ್ರೇಯ ಮೊದಲಾದ ಶೂದ್ರವರ್ಗದವರು ಅವರ ಅನುಯಾಯಿಗಳಾಗಿ ಸಂನ್ಯಸನವನ್ನು ಸ್ವೀಕರಿಸಿದರು. ಚಂದನಬಾಲಾ, ಮೃಗಾವತೀ ಮೊದಲಾದ ರಾಜವರ್ಗದ ಸ್ತ್ರೀಯರೇ ಅಲ್ಲದೆ, ಸುಭದ್ರಾ, ರೇವತಿ ಮೊದಲಾದ ಶ್ರೇಷ್ಠಿವರ್ಗದ ಸ್ತ್ರೀಯರೂ ಕೂಡ ಅವರ ಅನುಯಾಯಿಗಳಾಗಿ ಸಂನ್ಯಸನವನ್ನು ಸ್ವೀಕರಿಸಿದರು. ಸಂನ್ಯಸನ ದೀಕ್ಷೆಯನ್ನು ಧರಿಸಲಾರದ ಕೆಲವರು ಮಹಾವೀರರು ಬೋಧಿಸಿದ ಗೃಹಸ್ಥಧರ್ಮವನ್ನು ಪಾಲಿಸುತ್ತ ಉತ್ತಮ ಶ್ರಾವಕರೆನಿಸಿದರು. ಅವರಲ್ಲಿ ಕ್ಷತ್ರಿಯರು, ರೈತರು, ಕುಂಬಾರರು, ಚಮ್ಮಾರರೇ ಮೊದಲಾದವರು ಸಮಾವೇಶಗೊಂಡರು.

ಮಹಾವೀರರ ಬೋಧೆಗಳು ಕೇವಲ ಬಾಯಿಮಾತಿನವಲ್ಲ; ಸ್ವತಃ ಆಚರಣೆಗೆ ತಂದು ಸಮಾಜದಲ್ಲಿ ಅವುಗಳನ್ನು ಗಟ್ಟಿನೆಲೆಯಾಗಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನಗಳಾಗಿದ್ದವು. ಸಮಾಜದ ಸಮಸ್ಯೆಗಳನ್ನು, ದೋಷಗಳನ್ನು ಅನಾವರಣಗೊಳಿಸಿ, ಅವುಗಳನ್ನು ಮುಖಾಮುಖಿಯಾಗಿ ಎದುರಿಸಿದ ಮಹಾವೀರರು ಸಮಾಜದ ಹಿತವನ್ನು ಬಯಸುವ ಧರ್ಮನಾಯಕರೆನಿಸಿದರು; ಕಾರಣಪುರುಷರೆನಿಸಿದರು. ಮೂವತ್ತು ವರ್ಷಗಳ ಕಾಲ ಸತತವಾಗಿ ಧರ್ಮಮಾರ್ಗದಿಂದ ಕೂಡಿದ ಜೀವನಶೈಲಿಯನ್ನು ಜನತೆಯಲ್ಲಿ ರೂಢಿಸಲು ಪ್ರಯತ್ನ ಮಾಡಿ ಕ್ರಿ.ಪೂ.೫೨೭ರಲ್ಲಿ ದೇಹತ್ಯಾಗ ಮಾಡಿ ಮುಕ್ತರಾದರು.

ಜನನ–ಮರಣ ಇವುಗಳ ನಡುವಿನ ಜೀವಿತಾಂತರದಲ್ಲಿ ವ್ಯಕ್ತಿಯ ಜೀವನಕ್ರಮ, ಕಾರ್ಯಸಾಧನೆಗಳು ಯಾವ ರೀತಿಯಲ್ಲಿ ಅರ್ಥಪೂರ್ಣತೆಯನ್ನು ಪಡೆದುಕೊಳ್ಳುತ್ತವೆ ಎಂಬುದರ ಮೇಲೆ ಆ ವ್ಯಕ್ತಿಯ ಜನನ ಮರಣಗಳಿಗೆ ಒಂದು ವಿಶೇಷ ಸ್ವರೂಪ ಮೂಡಿಬರುತ್ತದೆ. ಅಂತೆಯೇ ಮಹಾವೀರರ ಜನ್ಮದಿನವನ್ನು ಇಂದಿಗೂ ಜಯಂತ್ಯುತ್ಸವವಾಗಿಯೂ, ಮರಣ ದಿನವನ್ನು ಮೋಕ್ಷಕಲ್ಯಾಣ ಉತ್ಸವವಾಗಿಯೂ, ದೀಪಾವಳಿಯನ್ನು ಪರ್ವದಿನವಾಗಿಯೂ ಆಚರಿಸಲಾಗುತ್ತಿದೆ. ಮಹಾವೀರರು ಯಾವುದೋ ಒಂದು ಪಂಥಕ್ಕೆ ಮಾತ್ರ ಸೇರಿದವರಲ್ಲ. ಜೈನಧರ್ಮೀಯರ ೨೪ನೆಯ ತೀರ್ಥಂಕರರೆಂದು ಪ್ರಸಿದ್ಧರಾಗಿದ್ದರೂ ಅವರು ಪ್ರತಿಪಾದಿಸಿದ ತತ್ತ್ವಗಳು ಸಾರ್ವತ್ರಿಕ ನೆಲೆಯ ಸಮಾಜೋದ್ಧಾರದ ಸೂತ್ರಗಳಾಗಿ ಎಲ್ಲರಿಗೂ ಮಾನ್ಯವಾದುವು. ಮಹಾವೀರರನ್ನು ಹಾಗೂ ಅನೇಕ ಮಹಾಪುರುಷರನ್ನು ನಾವು ಭಾರತೀಯರು ಪೂಜಿಸುತ್ತೇವೆ; ಮೆಚ್ಚುತ್ತೇವೆ. ವರ್ಷಂಪ್ರತಿ ವಿವಿಧ ರೀತಿಯ ಉತ್ಸವಗಳನ್ನು ಆಚರಿಸಿ ಅವರನ್ನು ನೆನೆಯುತ್ತೇವೆ. ಆದರೆ ಅವುಗಳೆಲ್ಲದರ ಅರ್ಥಪೂರ್ಣತೆ ಇರುವುದು ಅವರ ಆದರ್ಶಗಳನ್ನು ಆಚರಿಸಿದಾಗ ಮಾತ್ರ. ಮಹಾವೀರರೇ ಹೇಳಿರುವಂತೆ, ಧರ್ಮ ಕೇವಲ ಕೇಳುವಿಕೆಯ ಹೇಳುವಿಕೆಯ ಅಂಶವಾಗಬಾರದು; ಜೀವನದ ಕಾಯಕದಲ್ಲಿ ಅದು ಸಮಾವೇಶಗೊಳ್ಳಬೇಕು. ಮಹಾಪುರುಷರ ಜನ್ಮೋತ್ಸವ ಆಚರಣೆಯ ಸಾರ್ಥಕತೆಯನ್ನು ತನ್ಮೂಲಕ ನಾವು ಕಂಡುಕೊಳ್ಳಬೇಕಿದೆ. ✪

## ಖ್ಯಾತನಾಮರ ಚತುರೋಕ್ತಿಗಳು

ಒಮ್ಮೆ ಗಾಂಧೀಜಿಯವರ ಆಶ್ರಮದ ಕೋಣೆಗಳನ್ನು ಶುಭ್ರವಾಗಿಡುವ ಸಲುವಾಗಿ, ಸೊಳ್ಳೆನಿವಾರಕ ಔಷಧಿಗಳನ್ನು ಸಿಂಪಡಿಸುತ್ತಿದ್ದರು. ಆಗ ಗಾಂಧೀಜಿ ವಾಸಿಸುತ್ತಿದ್ದ ಕೋಣೆಯಲ್ಲಿ ಒಂದು ಭಾರಿ ಗಾತ್ರದ ಸೊಳ್ಳೆ ಸಿಕ್ಕಿತಂತೆ. ಆ ಸತ್ತ ಸೊಳ್ಳೆಯನ್ನು ಗಾಂಧೀಜಿಯವರಿಗೆ ತೋರಿಸುತ್ತ, "ನೋಡಿ, ಬಾಪೂಜಿ! ನಿಮ್ಮ ಕೋಣೆಯಲ್ಲಿ ಎಷ್ಟು ದೊಡ್ಡ ಸೊಳ್ಳೆ ಇತ್ತು" ಎಂದರಂತೆ.

ಗಾಂಧೀಜಿ ಆ ಸೊಳ್ಳೆಯನ್ನು ಪರಿಶೀಲಿಸುತ್ತ, "ಹೌದು, ಅನುಮಾನವೇ ಇಲ್ಲ. ಇದು ನಿಜಕ್ಕೂ ಮಹಾತ್ಮನ ಸೊಳ್ಳೆಯೇ! ಇಲ್ಲದಿದ್ದಲ್ಲಿ ಇದು ಇಷ್ಟೊಂದು ದೊಡ್ಡದಾಗಿರಲು ಸಾಧ್ಯವೇ ಇಲ್ಲ" ಎಂದು ಉದ್ಗರಿಸಿದರಂತೆ, ತುಟಿಗಳಲ್ಲಿ ನಗೆ ಚಿಮ್ಮಿಸುತ್ತ.

❄ ❄ ❄

ಒಮ್ಮೆ ಲಾಲ್ ಬಹಾದುರ್ ಶಾಸ್ತ್ರಿಗಳು ಜಯಪುರ ಕಾಂಗ್ರೆಸ್ ಅಧಿವೇಶನಕ್ಕೆ ಹೊರಟಿದ್ದರು. ಆಗ ಅವರ ಕೈಲಿದ್ದ ಟ್ರಂಕು, ಕಂಕುಳಲ್ಲಿದ್ದ ಬಟ್ಟೆ ಗಂಟನ್ನು ನೋಡಿ ನೆಹರೂಜಿಗೆ ಅಚ್ಚರಿಯಾಯಿತು.

"ಇದೇನು ನಿಮ್ಮ ಈ ಅವಸ್ಥೆ?" ಕೇಳಿದರಂತೆ ಪಂಡಿತ್‌ಜಿ.

ಅದಕ್ಕೆ ಶಾಸ್ತ್ರಿಜಿ, "ನಾನು ಮಂತ್ರಿಯಾಗಿದ್ದಾಗ, ನನ್ನ ಗಂಟುಮೂಟೆಗಳನ್ನು ಸರ್ಕಾರ ಹೊರುತ್ತಿತ್ತು. ಈಗ ನಾನು ಒಬ್ಬ ಸಾಮಾನ್ಯ ವ್ಯಕ್ತಿ. ಹೀಗಿರುವಾಗ ನನ್ನ ಗಂಟುಮೂಟೆಗಳಿಗೆ, ನನ್ನ ತೋಳುಗಳೇ ಆಧಾರ" ಎಂದರು. **–ಶಾರದಾತನಯ, ತುಮಕೂರು**